O.S.36/2017

DW : 2

ದಿನಾಂಕ 20-06-2019 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಸ್ ವಿ ಟಿ ವಕೀಲರಿಂದಃ

ದಾವೆಯ ಪರಿಹಾರದ ಬಗ್ಗೆ ಮಾಹಿತಿ ಇದೆ. ನನಗೆ ಸೇರಿದ ಯಾವುದೇ ಜಮೀನು ಇಲ್ಲ. ನಾನು ಹೋಟೆಲ್ ವ್ಯಾಪಾರ ಹಾಗೂ ವ್ಯವಸಾಯ ಮಾಡುತ್ತೇನೆ. ಪ್ರತಿವಾದಿಗಳ ಜಮೀನಿನಲ್ಲಿ ಕೋರಿನ ಆಧಾರದ ಮೇಲೆ ನಾನು ವ್ಯವಸಾಯ ಮಾಡುತ್ತೇನೆ. ಸರ್ವೆನಂ.2/1 ರಲ್ಲಿ ಸುಮಾರು 10 ಗುಂಟೆಯಲ್ಲಿ ವ್ಯವಸಾಯ ಮಾಡುತ್ತೇನೆ. ಸರ್ವೆ ನಂ.2/1 ವಿಸ್ತೀರ್ಣ ಸುಮಾರು 9 ಎಕರೆ ಗಿಂತ ಹೆಚ್ಚಿದೆ. ಅದರಲ್ಲಿ 3 ಪೋಡಗಳಿವೆ. ತಲಾ 3 ಎಕರೆಯಂತೆ ಒಂದು ಪೋಡಿನ ವಿಸ್ತೀರ್ಣ ಇದೆ. 3 ಎಕರೆ 4 ಗುಂಟೆ, 2 ಎಕರೆ 12 ಗುಂಟೆ, 3 ಎಕರೆ 14 ಗುಂಟೆಯಂತೆ 3 ಪೋಡಿನ ವಿಸ್ತೀರ್ಣ ಎಂದರೆ ಸರಿ. 3 ಎಕರೆ 4 ಗುಂಟೆಯನ್ನು ನಾಗಮ್ಮ, 3 ಎಕರೆ 14 ಗುಂಟೆಯನ್ನು 4 ನೇ ಪ್ರತಿವಾದಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ. 3 ಪೋಡಿನ ವಿಸ್ತೀರ್ಣಗಳು ಪ್ರತ್ಯೇಕವಾಗಿವೆ ಎಂದರೆ ಸರಿ. ವಾದಿ ದಾವಾಸ್ತಿಯಲ್ಲಿ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ವಾದಿ ತನ್ನ ತಂದೆಯ ಕಾಲದಿಂದಲೂ ದಾವಾಸ್ತಿಯಲ್ಲಿ ಸ್ವಾಧೀನ ಇದ್ದು ಆ ಸಂಬಂಧ ಅವರ ಹೆಸರಿಗೆ ಕಂದಾಯದ ದಾಖಲೆಗಳು ಬರುತ್ತಿವೆ ಎಂದರೆ ಗೊತ್ತಿಲ್ಲ. 4 ನೇ ಪ್ರತಿವಾದಿಗೆ ಸೇರಿದ 3 ಎಕರೆ 14 ಗುಂಟೆ ಜಮೀನಿನ ಉತ್ತರಕ್ಕೆ ಪ್ರಕಾಶ ಬಾಣಾವರ, ದಕ್ಷಿಣಕ್ಕೆ ಶೇಖಸಂದಿ, ಪೂರ್ವಕ್ಕೆ ತಳವಾರ ಹರಿಜನರ ಜಮೀನು, ಪಶ್ಚಿಮಕ್ಕೆ ತುಮ್ಮಿನಕಟ್ಟಿ ದಾರಿ ಇದೆ. ದಾವಾಸ್ತಿಯ ಚಕ್ಕುಬಂದಿ ಗೊತ್ತಿಲ್ಲ. 1 ನೇ ಪ್ರತಿವಾದಿಗೆ ಸೇರಿದ 3 ಎಕರೆ 4 ಗುಂಟೆ ಜಮೀನಿನ ಪೂರ್ವಕ್ಕೆ ತುಮ್ಮಿನಕಟ್ಟಿ ರಸ್ತೆ ಪಶ್ಚಿಮಕ್ಕೆ ರಾಣೇಬೆನ್ನೂರು ರಸ್ತೆ, ಉತ್ತರಕ್ಕೆ ಬಾಣಾವರ, ದಕ್ಷಿಣಕ್ಕೆ ಬಾಣಾವರ ರವರ ಸ್ವತ್ತು ಬರುತ್ತದೆ. ಪ್ರತಿವಾದಿಗಳು, ನಾನು ಅನ್ಯೋನ್ಯವಾಗಿದ್ದೇವೆ, ಅವರು ನನಗೆ ಸಹಾಯ ಮಾಡುತ್ತಾರೆ. ಹಿಂದಿನ ಮುದ್ದತ್ತಿನಂದು ಸಾಕ್ಷಿ ನುಡಿಯುವಂತೆ ಪ್ರತಿವಾದಿಗಳು ಕೇಳಿಕೊಂಡಿದ್ದರು. ಸರ್ವೆ ನಂ.2/1 ರಲ್ಲಿ 10 ಗುಂಟೆ ಯಲ್ಲಿ ಸುಗಂಧರೋಜ ಹೂವಿನ ಬೆಳೆ ಇದ್ದು, ಉಳಿದ ಜಮೀನು ಬೀಳಾಗಿದೆ. ಪ್ರತಿವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಾವೆ ಹಾಗೂ ದಾವಾ ಸ್ವಸ್ತಿಯ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತುಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೆ ಸರಿ ಇದೆ.

ಸಹಿ

ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.